# ಆಹಾ ಸುದ್ದಿ!

★ ಸಸಿತೋಟ



ಜಪಾನಿನಲ್ಲಿ ವರ್ಷಕ್ಕೊಮ್ಮೆ ಬೇಸಿಗೆಯಲ್ಲಿ ಬೀದಿಗಳನ್ನು ತಣಿಸುವ ಸಂಪ್ರದಾಯ ನಡೆಯುತ್ತದಂತೆ. ಪರಿಚಾರಿಕೆಯರ ಉಡುಪು ತೊಟ್ಟ ಯುವತಿಯರು ನೀರನ್ನು ಪ್ರೋಕ್ಷಣೆ ಮಾಡುವುದನ್ನು ನೋಡಲೇ ಸಾವಿರಾರು ಮಂದಿ ಸೇರುತ್ತಾರಂತೆ. ಬೀದಿಗಳ ಜೊತೆ ಕಣ್ಣುಗಳೂ ತಂಪಾಗಬೇಡವೇ!

ಚೀನಾದ ಪೀಪಲ್ಸ್ ಪಾರ್ಕ್ ಮೃಗಾಲಯದ ಸಿಂಹ ಈಗ 'ಗ್ರಾಮ ಸಿಂಹ' ಎಂಬುದು ಗೊತ್ತಾಗಿ ಹುಯಿಲೆದ್ದಿದೆ. ಬಣ್ಣ ಬಳಿದುಕೊಂಡು ಸಿಂಹದ ಚರ್ಮದೊಳಗೆ ಅಡಗಿದ್ದರೂ ಟಿಬೆಟನ್ ತಳಿಯ ನಾಯಿ ಮೂತಿಯನ್ನು ಪಂಜರದೊಳಗಿಂದ ಚಾಚಿ ಕುಂಯ್‌ಗುಡುತ್ತಿತ್ತಂತೆ. ಅಷ್ಟೇ ಅಲ್ಲ, ಅಲ್ಲಿ ಚಿರತೆ, ಹಾವುಗಳ ವೇಷದಲ್ಲಿ ಬೇರೆ ಬೇರೆ ಪ್ರಾಣಿಗಳು ಆ್ಯಕ್ಟಿಂಗ್ ಮಾಡುತ್ತಿದ್ದು, ಗೊರಿಲ್ಲಾ ವೇಷದಲ್ಲಿ ಅದ್ಯಾವ ಪುಣ್ಯ ಪುರುಷ ಕೂತಿದ್ದಾನೋ!

ಶಿಕಾಗೋದ ವಿಮಾನ ನಿಲ್ದಾಣದಲ್ಲಿ ಆಡು, ಮೇಕೆ, ಕತ್ತೆಗಳ ಒಂದು ದೊಡ್ಡ ಮಂದೆಯನ್ನೇ ಅಧಿಕಾರಿಗಳು ಬಾಡಿಗೆಗೆ ತಂದು ಬಿಟ್ಟಿದ್ದಾರಂತೆ. 120 ಎಕರೆ ವ್ಯಾಪ್ತಿಯಲ್ಲಿ ಬೆಳೆದ ಹುಲ್ಲನ್ನು ನೀಟಾಗಿ ಕತ್ತರಿಸಿ, ನುಣ್ಣಗೆ ಶೇವ್ ಮಾಡಿದ ಕೆನ್ನೆಯ ಹೊಳಪನ್ನು ನೆಲಕ್ಕೆ ತರುತ್ತವೆ ಎಂಬುದು ಅಧಿಕಾರಿಗಳ ಅಂಬೋಣ. ಆದರೆ ಒಳಗುಟ್ಟೆಂದರೆ ದುಬಾರಿ ಮಷಿನ್‌ಗಳಿಗಿಂತ ಪ್ರಾಣಿಗಳಿಗೆ ಬಾಡಿಗೆ ಕಡಿಮೆಯಂತೆ! ವಿದೇಶಗಳಿಗೆ ಪಯಣಿಸಿ ಅಲ್ಲಿಯದನ್ನು ಕಲಿತುಕೊಂಡು ಬರುವ ನಮ್ಮ ಅಧಿಕಾರಿಗಳು ಇದನ್ನು ಕೂಡಾ ಕಲಿಕಾ ಪಟ್ಟಿಗೆ ಸೇರಿಸಿಕೊಳ್ಳಬಹುದು.



ನ್ಯೂಯಾರ್ಕ್‌ನ ಬ್ರೂಕ್ಲಿನ್ ಸೇತುವೆಗೆ ನೇತಾಡುತ್ತಿರುವ 'ಲವ್ ಲಾಕ್'ಗಳಿವು. ನಿಶ್ಚಿತಾರ್ಥ, ಮದುವೆ, ವಾರ್ಷಿಕೋತ್ಸವ ಎಲ್ಲವನ್ನೂ ಸಾರ್ವಜನಿಕರಿಗೆ ತಿಳಿಸಲು ಈ ರೀತಿ ಲವ್ವಿಗೇ ಬೀಗ ಜಡಿದು ನೇತು ಹಾಕುತ್ತಾರಂತೆ. ವಿಚ್ಛೇದನವಾದರೆ ಬೀಗ ತೆರೆದು ನೇತಾಡಿಸುತ್ತಾರೋ ಎಂಬುದು ಗೊತ್ತಾಗಿಲ್ಲ. ನಮ್ಮಲ್ಲಿ ಹರಕೆ ಕಟ್ಟಿಕೊಂಡು ದೇವಸ್ಥಾನಕ್ಕೆ ಬೀಗಗಳನ್ನು ನೇತು ಹಾಕುವ ಸಂಪ್ರದಾಯದಲ್ಲಿ ಸ್ವಲ್ಪ ಮಾರ್ಪಾಡು ಮಾಡಿಕೊಂಡಿದ್ದಾರೆ ಎಂದಂತಾಯ್ತು.




ನ್ಯೂಯಾರ್ಕ್ ಸಿಟಿ ಜೈಲಿಗೆ ಪದೇ ಪದೇ ಭೇಟಿ ನೀಡುತ್ತಿದ್ದ ವ್ಯಕ್ತಿ ಇನ್ನು 10 ವರ್ಷಗಳವರೆಗೆ ಅಲ್ಲಿಯ ಕಾಯಂ ನಿವಾಸಿ. ಸಣ್ಣ ಪುಟ್ಟ ಅಪರಾಧಗಳ ಹಿನ್ನೆಲೆಯಲ್ಲಿ ಕೆಲವು ಕಾಲ ಜೈಲು ಶಿಕ್ಷೆಯಾಗಿ ಬಿಡುಗಡೆಗೊಂಡಿದ್ದ ಮ್ಯಾಥ್ಯೂ ಎಂಬ ಯುವಕ ಅಧಿಕಾರಿ ವೇಷದಲ್ಲಿ ಆಗಾಗ ಒಳ ನುಗ್ಗುತ್ತಿದ್ದನಂತೆ. ಏಕೆಂದರೆ ಒಳಗಿದ್ದವರು ಒಳ್ಳೆಯವರಂತೆ, ಅವನಿಗೆ ಪ್ರಾಮುಖ್ಯ ಕೊಡುತ್ತಿದ್ದರಂತೆ. ಅದೀಗ ಸಾಬೀತಾಗಿ 10 ವರ್ಷ ಶಿಕ್ಷೆ ಪ್ರಕಟಿಸಿದಾಗ ಹೊರಗೆ ಬಿಡಿ ಎಂದು ಗೋಗರೆಯುತ್ತಿದ್ದಾನೆ ಎಂದು ವರದಿ ಹೇಳಿದೆ. ಒಳ ಹೋಗಲು, ಹೊರಗೆ ಬರಲು ಪುರುಸೊತ್ತಿಲ್ಲದ ಅವಸರದ ವ್ಯಕ್ತಿ ಇರಬಹುದು.

ಚೀನಾದಲ್ಲಿ ನೀರಿನಡಿ ಆಡುವ 'ಮಾಜೋಂಗ್' ಆಟಕ್ಕೆ ಮರುಹುಟ್ಟು ನೀಡಲಾಗಿದೆಯಂತೆ. ಈಜುಗಾರರು ನೀರಿನಡಿಯಲ್ಲಿ ಕೂತು ಆರಾಮವಾಗಿ ಆಟ ಆಡುವುದು ಅಲ್ಲಿ ಜನಪ್ರಿಯ. ಆದರೆ ಅಲ್ಲಿ ಜುಲೈ- ಆಗಸ್ಟ್‌ನಲ್ಲಿ ಬಿರು ಬೇಸಿಗೆ. ಸೆಕೆ ತಡೆದುಕೊಳ್ಳಲಾರದವರು ಇಂತಹ ಗಿಮಿಕ್ ಮಾಡುತ್ತಿದ್ದಾರೆ ಎಂದು ಸ್ಥಳೀಯ ಪತ್ರಿಕೆಗಳು ಲೇವಡಿ ಮಾಡಿವೆಯಂತೆ. ಚಳಿ ಶುರುವಾಗಲಿ, ಇಂತಹ ಆಟಗಳಿಗೆಲ್ಲಾ ಟಾಟಾ ಹೇಳದಿದ್ದರೆ ನೋಡಿ ಎಂದು ಮಾಧ್ಯಮಗಳು ಸವಾಲು ಹಾಕಿವೆ.

